**CC 54/2017**
**PW.3**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**
**ದೊಡ್ಡಬಳ್ಳಾಪುರ**
**ಸಿ ಸಿ ನಂ : 54/2017**

**ಪಿ ಡಬ್ಲ್ಯೂ - 3**
**ಸಿ ಡಬ್ಲ್ಯೂ - 3**

**ದಿಃ 02.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ಜಯಲಕ್ಷ್ಮೀ**
**ಗಂಡನ ಹೆಸರು ಃ ಬಸವರಾಜು**
**ವಯಸ್ಸು ಃ 33 ವರ್ಷ**
**ಉದ್ಯೋಗ ಃ ಗೃಹಿಣಿ**
**ವಿಳಾಸ ಃ ಕತ್ತಾಲೆಪಾಳ್ಯ, ದೊಡ್ಡಬಳ್ಳಾಪುರ ತಾಲ್ಲೂಕು**
**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದ**

ಆರೋಪಿತರು ಗೊತ್ತು. 2015 ರಲ್ಲಿ ನಾನು ಹಾದ್ರಿಪುರ ಗ್ರಾಮ ಪಂಚಾಯಿತಿಯ ಅಧ್ಯಕ್ಷೆಯಾಗಿದ್ದೆ. 2016 ರಲ್ಲಿ ನನಗೆ ಪಂಚರಾಗಲು ಬರಲು ತಿಳಿಸಿದ್ದರು. ಅದರಂತೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಚಿಕ್ಕಹೆಜ್ಜಾಜಿ ಕಾಲೋನಿ, ದೊಡ್ಡಬಳ್ಳಾಪುರ ತಾಲ್ಲೂಕಿಗೆ ಹೋಗಿದ್ದೆ. ಅಲ್ಲಿ ಸರ್ವೇ ನಂ. 14 ರಲ್ಲಿ 4 ಎಕರೆ 28 ಗುಂಟೆ ಸರ್ಕಾರಿ ಶಾಲೆಗೆ ಸೇರಿದ್ದಾಗಿತ್ತು. ಸದರಿ ಜಮೀನನ್ನು ಜಿಲ್ಲಾಧಿಕಾರಿಯವರು ಮಂಜೂರು ಮಾಡಿದ್ದರು. ಸದರಿ ಜಾಗದಲ್ಲಿ ಶಾಲಾ ಕಟ್ಟಡವಿದ್ದು ಶಾಲೆ ನಡೆಯುತ್ತಿತ್ತು. ಶಾಲೆಯ ಮುಖ್ಯೋಪಾಧ್ಯಾಯರು 1 ನೇ ಆರೋಪಿಯು 7 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ ಎಂದು ದೂರನ್ನು ದಾಖಲಿಸಿದ್ದರು. 2 ನೇ ಆರೋಪಿಯು ಒತ್ತುವರಿ ಮಾಡಿಕೊಂಡ ಜಮೀನಿನ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಯು ನಿಪಿ-2 ಪಂಚನಾಮೆಯಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಿಪಿ-2 ಕ್ಕೆ ಸಹಿಯನ್ನು ನಾನು ಶಾಲೆಯ ಜಮೀನು ಒತ್ತುವರಿಯಾದ ಬಗ್ಗೆ ಶಾಲೆಯಲ್ಲಿ ಮಾಡಿರುತ್ತೇನೆ. ಪೋಲೀಸರಿಗೆ ನಾನು ಹೇಳಿಕೆಯನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. (2 ನೇ ಆರೋಪಿಯು ಈ ದಿನ ಗೈರು ಹಾಜರಿದ್ದು, 2 ನೇ ಆರೋಪಿಯ ಗುರುತಿಸುವಿಕೆಯನ್ನು 2 ನೇ ಆರೋಪಿಯ ಪರ ವಕೀಲರು ಅಲ್ಲಗಳೆದಿರುವುದಿಲ್ಲ.)

**CC 54/2017**
**PW.3**

**(ಈ ಹಂತದಲ್ಲಿ ಸ ಸ ಅ ರವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಸ ಸ ಅ ರವರಿಂದ**

2 ನೇ ಆರೋಪಿಯು ಕೂಡ ಶಾಲೆಯ ಆಟದ ಮೈದಾನಕ್ಕೆ ಬಿಟ್ಟಿದಂತಹ ಜಮೀನಿನಲ್ಲಿ ಒತ್ತುವರಿ ಮಾಡಿಕೊಂಡು ಉಳುಮೆ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ಗೊತ್ತಿದ್ದರೂ 2 ನೇ ಆರೋಪಿಗೆ ಸಹಾಯ ಮಾಡಲು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎ.ಎನ್.ಎಸ್., ವಕೀಲರಿಂದ**

ಈ ವಿಚಾರದ ಕುರಿತಾಗಿ ನಾನು 1 ಬಾರಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಚಿಕ್ಕಹೆಜ್ಜಾಜಿ ಕಾಲೋನಿ, ದೊಡ್ಡಬಳ್ಳಾಪುರ ತಾಲ್ಲೂಕಿಗೆ ಹೋಗಿರುತ್ತೇನೆ. ನಾನು ಪೋಲೀಸ್ ಠಾಣೆಗೆ ಹೋಗಿಲ್ಲ. ದಿಃ 18.07.2016 ರಂದು ಹೋಗಿರುತ್ತೇನೆ. ಈ ದಿನಾಂಕದ ಹೊರತಾಗಿ ಬೇರೆ ಯಾವುದೇ ದಿನಾಂಕದಂದು ನಾನು ಈ ಪ್ರಕರಣದ ಕುರಿತು ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ. ನಾನು ಚಿಕ್ಕಹೆಜ್ಜಾಜಿ ಶಾಲೆಯ ಹತ್ತಿರ ಹೋದಾಗ ನನ್ನ ಹೊರತಾಗಿ ಯಾರಿದ್ದರು ಎಂದು ಗೊತ್ತಿಲ್ಲ. ನಿಪಿ-2 ರಲ್ಲಿ ಒತ್ತುವರಿಯಾಗಿರುವ ವಿಚಾರದ ಬಗ್ಗೆ ಇರುತ್ತದೆ. ನಿಪಿ-2 ರಲ್ಲಿನ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಎಷ್ಟು ಅಡಿ ಯಾವ ದಿಕ್ಕಿಗೆ ಒತ್ತುವರಿಯಾಗಿದೆ ಎಂದು ಬರೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿ. ಆರೋಪಿತರು ಯಾವುದೇ ಒತ್ತುವರಿ ಮಾಡದೇ ಇದ್ದರೂ ಸರ್ಕಾರಿ ಶಾಲೆ ಎಂಬ ಕಾರಣಕ್ಕೆ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 18.07.2016 ರಂದು ನಾನು ಸರ್ಕಾರಿ ಶಾಲೆ, ಚಿಕ್ಕಹೆಜ್ಜಾಜಿಯ ಹತ್ತಿರ ಹೋಗಿ ಸಹಿ ಮಾಡದೇ ಇದ್ದರೂ ಸಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನ ರೀತ್ಯ ಬೆರಳಚ್ಚುಗಾರರಿಂದ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**